

# ನೊರೆಬಿಲ್ಲೆಗಳ ನಾನಾ ಅವತಾರ...

**ಸೋಪಿನ ಬಿಲ್ಲೆಯ ಹಿನ್ನೆಲೆಯನ್ನೊಮ್ಮೆ ಕೆದಕಿದರೆ ಬಗೆ ಬಗೆಯ ಅನುಭವಗಳು ಕಣ್ಣ ಮುಂದೆ ತೆರೆದುಕೊಳ್ಳುತ್ತವೆ.**

■ ನಳಿನಿ ಟಿ. ಭೀಮಪ್ಪ

ಹಳೆಯ ಕಾಲದಲ್ಲಿ ಕಿರಾಣಿ ಸಾಮಾನಿನ ಪಟ್ಟಿಯಲ್ಲಿ ಸೋಪು ಬರೆಯುವಾಗ ನಾಲ್ಕು ಮೈ ಸೋಪು, ನಾಲ್ಕು ಬಾರ್ ಸೋಪು ಅಂತ ಬರೆದುಬಿಟ್ಟರೆ ಮುಗಿಯಿತು. ಯಾವ ಕಂಪನಿ, ಬ್ರ್ಯಾಂಡ್ ಅಂತ ತಲೆ ಕೆಡಿಸಿಕೊಳ್ಳುತ್ತಿದ್ದವರೇ ಇಲ್ಲ. ಸಣ್ಣ ಕ್ರಿಕೆಟ್ ಬ್ಯಾಟ್‌ನಂತಿದ್ದ ಬಟ್ಟೆ ಸೋಪು, ತೂಕದ ಬಟ್ಟೆನಂತಿರುತ್ತಿದ್ದ ಮೈ ಸೋಪು, ನೋಡಲು ಥೇಟ್ ಹಳೆಯ ಸಿನಿಮಾ ನಾಯಕ ನಾಯಕಿಯರನ್ನು ನೆನಪಿಸುತ್ತ ಮನೆಮನೆಗಳ ಸಾಮಾನು ಇಡುವ ಗೂಡಿನಲ್ಲಿ ರಾಜರಾಣಿಯರ ಹಾಗೆ ವಿರಾಜಮಾನರಾಗುತ್ತಿದ್ದವು.

ಆಗ ಬಹುಶಃ ಅಂಗಡಿಯವರೂ ಕೆಂಪು ಸುಂದರಿ, ಗಜಗಾಮಿನಿಯಂತಿದ್ದ ಲೈಫ್‌ಬಾಯ್ ಬಿಟ್ಟರೆ ಬೇರೆ ಕೊಡುತ್ತಿರಲಿಲ್ಲ. ಬೇರೆ ಸೋಪುಗಳ ಬಗ್ಗೆ ಮಾಹಿತಿಯೂ ಮಧ್ಯಮ ವರ್ಗದವರಿಗೆ ಇರುತ್ತಿರಲಿಲ್ಲ ಬಿಡಿ. ‘ಲೈಫ್‌ಬಾಯ್ ಎಲ್ಲಿದೆಯೋ ಅಲ್ಲಿದೇ ಆರೋಗ್ಯಾ’ ಅಂತ ರೇಡಿಯೊದಲ್ಲಿ ಜಾಹೀರಾತು ಪ್ರಸಾರವಾದಾಗ, ಹೀಗ್ಯಾಕೆ ರೇಡಿಯೊದಲ್ಲಿ ಹಾಕ್ತಾರೆ ಅಂತ ಕೇಳಿದ್ದಕ್ಕೆ, ‘ನಮ್ಮ ಸೋಪನ್ನೇ ಹಚ್ಚಿಕೊಳ್ಳಿ ಅಂತ ಹೇಳೋದಕ್ಕೆ’ ಎಂದ ನೆನಪು. ಎಲ್ಲರೂ ಇದೇ ಸೋಪು ಹಚ್ಚುವಾಗ ಜಾಹೀರಾತಿನ ಅವಶ್ಯಕತೆ ಏನಿದೆ ಎಂಬುದೇ ನನಗೆ ಅಚ್ಚರಿ ಉಂಟುಮಾಡಿತ್ತು.

ಕ(ಇ)ಟ್ಟಿಗೆಯ ತುಂಡಿನ ಹಾಗಿರುತ್ತಿದ್ದ ಅದನ್ನು ನಾವು ಚಿಕ್ಕ ಮಕ್ಕಳು ಹಿಡಿಯುವಾಗ ಬಲು ಕಷ್ಟ ಪಡಬೇಕಿತ್ತು. ಅಷ್ಟು ಸುಲಭವಾಗಿ ಕರಗುತ್ತಿರಲಿಲ್ಲ. ಪುಸುಕ್ಕಂತ ಜಾರಿ ಬಿದ್ದು ಬಚ್ಚಲಿನ ತುಂಬೆಲ್ಲಾ ಓಡಾಡಿಸುತ್ತಿತ್ತು. ಎರಡೂ ಕೈಯಲ್ಲಿ ಗಟ್ಟಿಯಾಗಿ ಹಿಡಿದು ತಿಕ್ಕಿಕೊಳ್ಳಬೇಕಿತ್ತು. ಕೆಲವರ ಮನೆಯಲ್ಲಿ ಎರಡು ಭಾಗ ಮಾಡಿ ಕತ್ತರಿಸಿಯೂ ಉಪಯೋಗಿಸುತ್ತಿದ್ದರು. ಅದೊಂದು ರೀತಿ ಆಲ್‌ರೌಂಡರ್ ಇದ್ದ ಹಾಗೆ. ಮೈ ತೊಳೆಯಲೂ ಅದೇ, ತಲೆಗೂ ಅದೇ, ಮುಖಕ್ಕೂ ಅದೇ, ಕೈ ಕಾಲು ತೊಳೆಯಲೂ ಅದೇ, ಗಂಡಸರ ಶೇವಿಂಗ್‌ಗೂ ಅದೇ. ಹಳ್ಳಿಗಳಲ್ಲಂತೂ ಈ ನೊರೆಬಿಲ್ಲೆಗೆ ಬೇಡಿಕೆಯೇ ಇರಲಿಲ್ಲ. ಸವಳು ಮಣ್ಣನ್ನೇ ಮೈ ಸ್ನಾನಕ್ಕೂ, ತಲೆ ಸ್ನಾನಕ್ಕೂ ಬಳಸುತ್ತಿದ್ದರು.

ಸಿನಿಮಾ ತಾರೆಯರ ಸೌಂದರ್ಯ ಸಾಬೂನು ಎಂದು ರೇಡಿಯೊದಲ್ಲಿ, ಥಿಯೇಟರಿನಲ್ಲಿ ಸಿನಿಮಾ ಪ್ರಸಾರಕ್ಕೆ ಮುಂಚೆ ಬರುತ್ತಿದ್ದ ಮತ್ತೊಂದು ಸೋಪಿನ ಸಾಲುಗಳ ಆಕರ್ಷಣೆ ಹೆಣ್ಣುಮಕ್ಕಳನ್ನು ಮೊದಲು ಮರುಳು ಮಾಡಿತು. ಬರೀ ಲೈಫ್‌ಬಾಯ್‌ನ ವಾಸನೆಗೆ ಒಗ್ಗಿಹೋಗಿದ್ದ ಮೂಗುಗಳಿಗೆ ಬೇರೆ ಸೋಪಿನ ಪರಿಮಳ ಮೋಡಿ ಮಾಡಿತ್ತು. ಜಾಹೀರಾತಿನಲ್ಲಿ ತೋರಿಸಿದ ಹಾಗೆ ಮೈ ತುಂಬಾ ನೊರೆ ಬರಲು ಹರಸಾಹಸ ಮಾಡುತ್ತಿದ್ದೆವು. ಸೋಪು ಹಚ್ಚಿದರೆ ಬೆಳ್ಳಗಾಗಿಬಿಡುತ್ತೇವೆಂದು ನಾಲ್ಕೈದು ಬಾರಿ ತಿಕ್ಕಿದ್ದೇ ತಿಕ್ಕಿದ್ದು, ತೊಳೆದದ್ದೇ ತೊಳೆದದ್ದು, ಥೇಟ್, ತೆನಾಲಿರಾಮ ಕರಿನಾಯಿಯನ್ನು ಬೆಳ್ಳಗೆ ಮಾಡುವ ಕಥೆಯಂತೆ. ನಂತರ ಒಂದೊಂದಾಗಿ ಬೇರೆ ಬೇರೆ ಹೆಸರಿನ, ಬೇರೆ ಬೇರೆ ಬಣ್ಣದ ಸೋಪುಗಳು ಮಾರುಕಟ್ಟೆಗೆ ಲಗ್ಗೆಯಿಡತೊಡಗಿದವು.

ಬಹುತೇಕ ಸಿನಿಮಾಗಳಲ್ಲಿ ನಾಯಕ ನಾಯಕಿಯರ ರೊಮ್ಯಾನ್ಸ್ ಶುರುವಾಗುತ್ತಿದ್ದುದ್ದೇ ಬಚ್ಚಲಿನಲ್ಲಿ ಸೋಪಿನಿಂದ ಜಾರಿಬಿದ್ದ ಮೇಲೆ ಅಲ್ವಾ?

ಈ ಸೋಪಿನಲ್ಲಿ ಗಿಡಮೂಲಿಕೆ ಇದೆ, ಮತ್ತೊಂದರಲ್ಲಿ ಕೊಬ್ಬರಿ ಎಣ್ಣೆ ಇದೆ, ಬಾದಾಮಿ, ಕಡ್ಲೆಹಿಟ್ಟು, ಗುಲಾಬಿ, ನಿಂಬೆ ಹೀಗೆ ಹಣ್ಣು, ಹೂವು, ಕಿರಾಣಿ ಸಾಮಾನುಗಳನ್ನೆಲ್ಲ ಹಾಕಿದ್ದೇವೆ ಎಂದು ಸೋಪು ತಯಾರಕರು ಜಾಹೀರಾತು ನೀಡುತ್ತಿದ್ದಂತೆ ಪ್ರತಿಯೊಬ್ಬರ ಆಸಕ್ತಿ ಅಭಿರುಚಿಗಳು ಬದಲಾಗುತ್ತಾ ಸಾಗಿದವು. ಬರಬರುತ್ತಾ ತಮ್ಮ ಸೋಪು ಹಚ್ಚಿಕೊಂಡರೆ ವಯಸ್ಸೇ ಆಗುವುದಿಲ್ಲ ಎನ್ನುವಂಥ ಜಾಹೀರಾತುಗಳಿಂದ, ಚಿಕ್ಕ ವಯಸ್ಸಿನವರಂತೆ ಕಾಣುವ ಹಂಬಲದಲ್ಲಿ ಅಮ್ಮಂದಿರೆಲ್ಲ ಅದೇ ಸೋಪು ಕೊಳ್ಳುವ ಹಾಗೆ ಮಾಡುವಲ್ಲೂ ಸೋಪು ತಯಾರಕರ ಪ್ರಯತ್ನ ಸಾಗಿತು.

ಇನ್ನು ಒಬ್ಬರ ಸೋಪು ಒಬ್ಬರು ಹಚ್ಚುವ ಹಾಗಿಲ್ಲ ಚರ್ಮದ ಸಮಸ್ಯೆಗಳು ಬರುತ್ತವೆ, ಒಣ ಚರ್ಮ, ಹಸಿ ಚರ್ಮ, ಸಾಮಾನ್ಯ ಚರ್ಮಕ್ಕೆ, ಮೊಡವೆಗೆ ಬೇರೆ ಬೇರೆ ಸೋಪು ಬಳಸಬೇಕು ಎಂದು ಪ್ರಚಾರ ಮಾಡಿ, ತಲೆಯಲ್ಲಿ ಹುಳಬಿಟ್ಟ ಕೂಡಲೇ ಇಷ್ಟು ದಿನ ಇಲ್ಲದ ಅನುಮಾನ ಎಲ್ಲರನ್ನೂ ಮುತ್ತಿ ಗಂಡಸರಿಗೆ ಬೇರೆ, ಅಮ್ಮನಿಗೆ ಬೇರೆ, ಮಕ್ಕಳಿಗೆ ಬೇರೆ, ಹಸುಗೂಸಿಗೂ ಬೇರೆ ಸೋಪುಗಳು ಲಗ್ಗೆ ಇಟ್ಟವು.

ಈಗಂತೂ ತಲೆಗೆ ಸೋಪು ಮುಟ್ಟಿಸುವವರೇ ಕಡಿಮೆ. ಕೈ ತೊಳೆಯಲು ಹ್ಯಾಂಡ್‌ವಾಶ್, ಸ್ಯಾನಿಟೈಸರ್‌ಗಳು, ಮುಖಕ್ಕೆ ಫೇಸ್‌ವಾಶ್ ಇವೆ. ಆದರೆ ಮೈ ತೊಳೆಯಲು ಬಾಡಿವಾಶ್ ಬಂದಿದ್ದರೂ, ಬಹುತೇಕರು ಬಳಸುವುದು ಸೋಪಿನ ಬಿಲ್ಲೆಯನ್ನೇ. ಈಗ ಮುಷ್ಟಿಯೊಳಗೆ ಹುದುಗುವ ಪುಟ್ಟ ಬಿಸ್ಕತ್ತಿನ ಅಳತೆಯಿಂದ ಹಿಡಿದು, ದೊಡ್ಡ ದೊಡ್ಡ ಸೈಜಿನವರೆಗೂ ಸಿಗಬಲ್ಲವು.

ಸುಮಾರು ಆರು ಸಾವಿರ ವರ್ಷಗಳ ಇತಿಹಾಸವಿರುವ ಈ ನೊರೆಬಿಲ್ಲೆಯನ್ನು ಉಪಯೋಗಿಸದ ಮನುಷ್ಯರೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಜೀವನದಲ್ಲಿವು ಹಾಸುಹೊಕ್ಕಾಗಿವೆ. ■